

ಮನುಷ್ಯನಿಂದ ಶೋಷಣೆಗೊಳಗಾಗುವ ಯಂತ್ರಮಾನವರೆಲ್ಲ ಸೇರಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದರೆ ಹೇಗಿರಬಹುದು ಎಂಬ ಕಲ್ಪನೆಯಲ್ಲಿ ಹುಟ್ಟಿಕೊಂಡ ಕಿರುಚಿತ್ರವಿದು.

■ ಗೌರಿ

# ಯಂತ್ರಮಾನವರ ಸ್ವಾತಂತ್ರ್ಯ ಹೋರಾಟ!

ಯಂತ್ರಮಾನವರು ಮನುಷ್ಯನ ಬದುಕಿನ ಅವಿಭಾಜ್ಯ ಅಂಗವಾಗುವ ದಿನಗಳು ಹತ್ತಿರದಲ್ಲಿಯೇ ಬರುತ್ತಿವೆ ಎಂಬುದು ಮತ್ತೆ ಮತ್ತೆ ಕೇಳಿಬರುತ್ತಿರುವ ಮಾತು. ಸೈಬೋರ್ಗ್‌ಗಳು ಈಗಾಗಲೇ ಸಾಕಷ್ಟು ಜನಪ್ರಿಯವಾಗುತ್ತಿರುವುದೂ ಇದಕ್ಕೆ ಪುಷ್ಟಿ ಕೊಡುತ್ತಿವೆ. ಮುಂದೊಂದು ದಿನ ಮನೆಯ ಕೆಲಸಕ್ಕಾಗಿ, ಅಡುಗೆ ತಯಾರಿಕೆಗಾಗಿ, ಲೈಂಗಿಕ ತೃಷೆಗಾಗಿಯೂ ಸೈಬೋರ್ಗ್‌ಗಳನ್ನು ಬಳಸಿಕೊಳ್ಳುವ ದಿನಗಳು ಬರಬಹುದು ಎಂಬ ಕಲ್ಪನೆಯನ್ನು ಇಟ್ಟುಕೊಂಡೇ ನರಸಿಂಹ ಮೂರ್ತಿ ಅವರು ಒಂದು ಕಿರುಚಿತ್ರವನ್ನು ತಯಾರಿಸಿದ್ದಾರೆ.

ಜೀರೊ ಬಜೆಟ್‌ನಲ್ಲಿ ವಿಎಫ್‌ಎಕ್ಸ್ ತಂತ್ರಜ್ಞಾನ ಬಳಸಿಕೊಂಡೇ ತಯಾರಿಸಿದ ಕಿರುಚಿತ್ರ ಎಂಬುದನ್ನು ಚಿತ್ರತಂಡವೇ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದೆ.

ಜಗತ್ತಿನ ಬೇರೆ ಚಿತ್ರರಂಗಗಳಲ್ಲಿ ಸೈಬೋರ್ಗ್ ಅಥವಾ ರೋಬಾಟ್‌ಗಳನ್ನು ಇಟ್ಟುಕೊಂಡು ಸಿನಿಮಾಗಳು ಬಂದಿವೆ. ಕನ್ನಡದಲ್ಲಿಯೂ ಅಪರೂಪಕ್ಕೆ ಅಂಥ ಪ್ರಯತ್ನಗಳು ನಡೆದಿವೆ. ಇದೂ ಅಂಥ ಪ್ರಯತ್ನಕ್ಕೇ ತಂತ್ರಜ್ಞಾನದ ಹೊಸ ಅಂಗಿಯನ್ನು ತೊಡಿಸುವ ಪ್ರಯತ್ನ.

ಒಂದು ಮನೆಯೊಳಗೆ ಹುಡುಗಿ ಅಡುಗೆ ಮಾಡುತ್ತಿದ್ದಾಳೆ. ನೋಡಿದರೆ ಬಡತನ ಚಾಪೆ ದಿಂಬು ಹಾಸಿಕೊಂಡು ಮಲಗಿದೆ ಎಂಬುದು ಗೊತ್ತಾಗುವ ಹಾಗಿದ್ದರೂ ಆ ಹುಡುಗಿ ಮಾತ್ರ ಅತ್ಯಾಧುನಿಕವೂ ದುಬಾರಿಯೂ ಎನಿಸುವಂಥ ಉಡುಪು ಧರಿಸಿದ್ದಾಳೆ. ಈಗಷ್ಟೇ ಯಾವುದೋ ಪಾರ್ಟಿಗೆ ಹೊರಟಿರುವ ಹಾಗೆ ಮೇಕಪ್ ಮಾಡಿಕೊಂಡಿದ್ದಾಳೆ. ಮತ್ತೊಂದು ಕಡೆಯಿಂದ, 'ಹಸಿವಾಗ್ತಿದೆ. ಏನಾದ್ರೂ ತಿನ್ನೋಕೆ ಕೊಡೇ' ಎಂಬ ಗಂಡಸಿನ ಗಡುಸಾದ ಧ್ವನಿ ಕೇಳುತ್ತದೆ.



**ಹೆಸರು:** 2047
**ನಿರ್ದೇಶನ:** ಡೀನಾ ವೆಲಿಕೋವ್‌ಸ್ಕಾಯ
**ನಿರ್ಮಾಣ:** ವಿ. ಆರ್ ಫಿಲ್ಮ್ಸ್
**ಛಾಯಾಗ್ರಹಣ:** ವರುಣ್ ಡಿ.ಕೆ.
**ಸಂಗೀತ:** ವೆಂಕಟೇಶ ಮತ್ತು ಆದಿತ್ಯ
**ತಾರಾಗಣ:** ಸೂರ್ಯ ಮನೋಹರನ್, ರಮ್ಯಾ ಕೃಷ್ಣ, ಮದನ್ ರಾಜ್

ಆ ಧ್ವನಿ ಮಾತಿನಲ್ಲಿಯೇ ಅವನಿಗೆ ಇವಳ ಬಗ್ಗೆ ಯಾವ ಗೌರವವೂ ಇಲ್ಲ ಎಂದು ತಿಳಿಯುತ್ತದೆ. ಊಟ ತೆಗೆದುಕೊಂಡು ಹೋಗಿ ಕೊಟ್ಟರೆ ಬಾಯಿಗಿಟ್ಟು ಅವಳ ಮುಖಕ್ಕೇ ಉಗಿಯುತ್ತಾನೆ. ಅವಳು ಮಾತ್ರ ಆ ಯಾವ ಅವಮಾನವನ್ನೂ ಮನಸ್ಸಿಗೆ ತೆಗೆದುಕೊಳ್ಳದೆ ನಗುನಗುತ್ತಲೇ, ಅವನ ಆರೋಗ್ಯದ ಬಗ್ಗೆ, ಕುಡಿತದ ಹಾನಿಯ ಬಗ್ಗೆ ನಿರ್ಭಾವುಕವಾಗಿ ಮಾತಾಡುತ್ತಾಳೆ.

ಹಾಗೆ ಅವನ ಉಪಚಾರಕ್ಕೆ ನಿಂತವಳು ಒಂದು ಯಂತ್ರ ಎಂಬುದು ತುಸುಹೊತ್ತಿನಲ್ಲಿಯೇ ಗೊತ್ತಾಗುತ್ತದೆ. ಅವಳ ಹೆಸರು ಸಹನಾ. ಅಷ್ಟೇ ಅಲ್ಲ, ಅವಳ ಸಹವಾಸ ಸಾಕಾಗಿ ಅವನು ಪಿಜ್ಜಾ ಜೊತೆಗೆ ಹೊಸದೊಂದು ಸೈಬೋರ್ಗ್ ಖರೀದಿಸಿದ್ದಾನೆ. ಆ ಸೈಬೋರ್ಗ್ ಇನ್ನೇನು ಮನೆಗೆ ಡೆಲಿವರಿ ಆಗುವ ಹಂತದಲ್ಲಿದೆ.

ಅದು ಗೊತ್ತಾಗಿ ಸಹನಾ 'ನನ್ನನ್ನು ರಿಪ್ಲೇಸ್ ಮಾಡಬೇಡ, ಹಾಗೆ ಮಾಡಿದರೆ ನನ್ನನ್ನು ಸ್ಕ್ರಾಪ್‌ಗೆ ಎಸೆಯುತ್ತಾರೆ. ನಾನು ನಿನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ. ನನಗೂ ಭಾವನೆಗಳಿವೆ' ಎಂದು ಬೇಡಿಕೊಳ್ಳುತ್ತಾಳೆ. ಅವಳಿಗೆ ಹೊರಜಗತ್ತಿಗಿರುವ ಎಲ್ಲ ಸಂಪರ್ಕವನ್ನೂ ಅವನು ಕಡಿದು ಹಾಕಿದ್ದರಿಂದ ಅವಳು ಅಸಹಾಯಕಳು. ಅವಳನ್ನು ಮುರಿದು ಬೇಸ್‌ಮೆಂಟ್‌ನಲ್ಲಿ ಹಾಕಿ, ಮತ್ತೊಂದು ಸೈಬೋರ್ಗ್ ಎದುರುಗೊಳ್ಳುತ್ತಾನೆ.

ಹೀಗೆ ಮನುಷ್ಯ, ತನ್ನ ಸಹಾಯಕ್ಕಷ್ಟೇ ಅಲ್ಲದೆ, ತನ್ನ ದುರಾಸೆಗಳಿಗೆ, ಚಾಪಲ್ಯಗಳಿಗೆ ಭಾವನೆಗಳು ಇರುವ ಸೈಬೋರ್ಗ್‌ಗಳನ್ನು ಶೋಷಿಸುತ್ತ ಹೋದರೆ ಏನಾಗಬಹುದು? ಅಂಥ ಸೈಬೋರ್ಗ್‌ಗಳೆಲ್ಲ ಸೇರಿ ತಮ್ಮ ಹಕ್ಕು ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟಕ್ಕಿಳಿಯಬಹುದು ಎಂಬ ಸೂಚನೆಯನ್ನು ಇಟ್ಟುಕೊಂಡು ಈ ಕಿರುಚಿತ್ರ ಮುಗಿಯುತ್ತದೆ. ಕೊನೆಯಲ್ಲಿ ಮತ್ತೊಂದು ಭಾಗ ಮಾಡುವ ಸೂಚನೆಯನ್ನೂ ಅವರು ಕೊಟ್ಟಿದ್ದಾರೆ.

ಇಲ್ಲಿ ವಿಎಫ್‌ಎಕ್ಸ್ ತಂತ್ರಜ್ಞಾನದ ಬಳಕೆಯನ್ನು ತೋರಿಸುವ ಹುಮ್ಮಸ್ಸೇ ಮುನ್ನಲೆಗೆ ಬಂದು ಕಥೆ ಸೊರಗಿದೆ. ಸಹನಾಳ ನೋವಾಗಲಿ, ಸಲೀನಾಳ ಸೇಡಾಗಲಿ, ಮನುಷ್ಯನ ಹುಚ್ಚುತನವಾಗಲಿ ನಮಗೆ ಮಾಹಿತಿಯಾಗಿ ಕಾಣಿಸುತ್ತಿರುತ್ತವೆಯೋ ಹೊರತು ಮನಸ್ಸನ್ನು ಕದಡುವ ಕಥನವಾಗಿ ಒಳಗಿಳಿಯುವುದಿಲ್ಲ. ಇದೇ ಈ ಕಿರುಚಿತ್ರದ ಮಿತಿ.

ಕಿರುಚಿತ್ರ ವೀಕ್ಷಣೆಗೆ https://bit.ly/3oelknu ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.